# ಕೃಷಿ ವಿಶ್ವವಿದ್ಯಾನಿಲಯ

**ಕನ್ನಡ ಅಧ್ಯಯನ ವಿಭಾಗ**
**ಜಿಕೆವಿಕೆ, ಬೆಂಗಳೂರು-560065**
**ದೂರವಾಣಿ: 373, 080-23330239**
Email:kannada@uasbangalore.edu.in

ಸಂ.ಕಅವಿ/ಕ.ಕೃ.ಪು.ಸ್ಪರ್ಧೆ/2025-26/32-ಇ ದಿನಾಂಕ: 09.06.2025

## ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 'ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ-2024'

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಕನ್ನಡದಲ್ಲಿ ಕೃಷಿ ಬರವಣಿಗೆಯನ್ನು ಪ್ರೋತ್ಸಾಹಿಸುವ ಸಲುವಾಗಿ, **'ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ'** ನೀಡುತ್ತಿದ್ದು, 2024ರ ಪ್ರಶಸ್ತಿಗಾಗಿ, 2024ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾಗಿರುವ ಕೃಷಿ ಸಂಬಂಧಿತ ಕನ್ನಡ ಪುಸ್ತಕಗಳನ್ನು ಲೇಖಕರಿಂದ ಆಹ್ವಾನಿಸಿದೆ. ಪ್ರಶಸ್ತಿಯು ರೂ. 10,000/- ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ಲೇಖಕರಿಗೆ ಮಾತ್ರ ನೀಡಲಾಗುವ ಈ ಪ್ರಶಸ್ತಿಗೆ ಲೇಖಕರು ನಿಗದಿತ ನಮೂನೆಯಲ್ಲಿ ತಮ್ಮ ಸ್ವ ವಿವರಗಳೊಂದಿಗೆ ಪ್ರಶಸ್ತಿಗೆ ಸಲ್ಲಿಸುವ ಪುಸ್ತಕದ ಮೂರು ಪ್ರತಿಗಳನ್ನು **ದಿನಾಂಕ: 30.07.2025ರೊಳಗೆ ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಗಾ.ಕೃ.ವಿ.ಕೇ., ಬೆಂಗಳೂರು-560065** ಇವರ ವಿಳಾಸಕ್ಕೆ ಕಳುಹಿಸಬೇಕು. ಹೆಚ್ಚಿನ ವಿವರಗಳಿಗೆ http://uasbangalore.edu.in ವೆಬ್ ತಾಣಕ್ಕೆ ಭೇಟಿ ನೀಡಿ ಅಥವಾ kannada.uas@gmail.com ಇ-ಮೇಲ್ ವಿಳಾಸಕ್ಕೆ ಅಥವಾ ದೂರವಾಣಿ ಸಂಖ್ಯೆ 080-23330153 ವಿಸ್ತರಣೆ 373 ಸಂಪರ್ಕಿಸುವುದು.

(ಡಾ.ಜಿ.ವೀರಭದ್ರಗೌಡ)
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು(ಪ್ರ)

Scanned with OKEN Scanner

# ಕೃಷಿ ಪುಸ್ತಕ ಪ್ರಶಸ್ತಿ–2024ರ ನಿಯಮ ಮತ್ತು ನಿಬಂಧನೆಗಳು

1. ಪುಸ್ತಕವು ಕನ್ನಡದಲ್ಲಿ ರಚಿತವಾಗಿರಬೇಕು, ಕೃಷಿ ಸಂಬಂಧಿತ ವಿಷಯಗಳಿಗೆ ಸಂಬಂಧಿಸಿರಬೇಕು ಹಾಗೂ ವಿಷಯವು ಸಮಗ್ರವಾಗಿರಬೇಕು.
2. ಪುಸ್ತಕವು ಸ್ವಂತ ರಚನೆಯಾಗಿರಬೇಕು.
3. ಪುಸ್ತಕವು ಅನುವಾದಿತ ಕೃತಿಯಾಗಿರಬಾರದು ಹಾಗೂ ಇತರ ಲೇಖಕರ ಬರಹಗಳ ಸಂಪಾದಿತ ಕೃತಿಯಾಗಿರಬಾರದು.
4. ಪುಸ್ತಕವು ಮೊದಲ ಪ್ರಕಟಣೆ/ಆವೃತ್ತಿಯಾಗಿರಬೇಕು ಹಾಗೂ ಮರುಮುದ್ರಿತ/ಪರಿಷ್ಕರಿಸಿ ಮರುಮುದ್ರಿಸಿದ ಕೃತಿಯಾಗಿರಬಾರದು.
5. ಪುಸ್ತಕವು ಯಾವುದೇ ಕೃಷಿ ಸಂಬಂಧಿತ ಕೈಪಿಡಿಯಾಗಿರಬಾರದು.
6. ಪುಸ್ತಕವು ಕನಿಷ್ಠ 1/8 ಕ್ರೌನ್ ಅಳತೆಯದ್ದಾಗಿರಬೇಕು ಮತ್ತು ತಾಂತ್ರಿಕ ಪುಟಗಳನ್ನು ಹೊರತುಪಡಿಸಿ ಕನಿಷ್ಠ 50 ಪುಟಗಳಷ್ಟಾದರೂ ಇರಬೇಕು.
7. ಪುಸ್ತಕವು ನಿರ್ದಿಷ್ಟಪಡಿಸಿದ ವರ್ಷದಲ್ಲೇ ಪ್ರಕಟವಾಗಿರಬೇಕು (2024ನೆಯ ಜನವರಿ 1ರಿಂದ 2024ನೇ ಡಿಸೆಂಬರ್ 31ರೊಳಗೆ ಪ್ರಕಟವಾಗಿರಬೇಕು).
8. ಈ ಪ್ರಶಸ್ತಿ ಲೇಖಕರಿಗೆ ಮಾತ್ರ ನೀಡುವುದು. ಪ್ರಕಾಶಕರಿಗೆ/ಮುದ್ರಕರಿಗೆ ನೀಡಲಾಗುವುದಿಲ್ಲ.
9. ಲೇಖಕರು ಮೃತರಾಗಿದ್ದಲ್ಲಿ ಕಾನೂನಿನನ್ವಯ ಅವರ ವಾರಸುದಾರರು ಪುಸ್ತಕವನ್ನು ಪ್ರಶಸ್ತಿಗೆ ಸಲ್ಲಿಸಬಹುದು ಹಾಗೂ ಅದರೊಂದಿಗೆ ಮೃತರ ಮರಣ ಪ್ರಮಾಣ ಪತ್ರವನ್ನು ಲಗತ್ತಿಸಿರಬೇಕು. ಆ ಪುಸ್ತಕ ಪ್ರಶಸ್ತಿ ಪಡೆದಲ್ಲಿ ಪ್ರಶಸ್ತಿ ಫಲಕವನ್ನು ಲೇಖಕರ ಹೆಸರಿಗೆ ನೀಡಲಾಗುವುದು ಮತ್ತು ಪ್ರಶಸ್ತಿ ಹಣದ ಚೆಕ್‌ಅನ್ನು ವಾರಸುದಾರರಿಗೆ ನೀಡಲಾಗುವುದು.
10. ಒಬ್ಬರಿಗಿಂತ ಹೆಚ್ಚು ಲೇಖಕರಿದ್ದಲ್ಲಿ ಪ್ರಶಸ್ತಿ ಮೊತ್ತವನ್ನು ಸಮಾನವಾಗಿ ಹಂಚಲಾಗುವುದು ಹಾಗೂ ಮೊದಲ ಲೇಖಕರನ್ನು ಮಾತ್ರ ಪ್ರಶಸ್ತಿ ಸ್ವೀಕರಿಸಲು ಆಹ್ವಾನಿಸಲಾಗುವುದು.
11. ಆ ವರ್ಷದಲ್ಲಿ ಒಬ್ಬ ಲೇಖಕರಿಂದ ಒಂದಕ್ಕಿಂತ ಹೆಚ್ಚು ಪುಸ್ತಕಗಳು ಪ್ರಕಟವಾಗಿದ್ದಲ್ಲಿ, ಅಂತಹ ಲೇಖಕರು ಗರಿಷ್ಠ ಮೂರು ವಿವಿಧ ಪುಸ್ತಕಗಳನ್ನು ಪ್ರಶಸ್ತಿಗೆ ಸಲ್ಲಿಸಬಹುದು.
12. **ಲೇಖಕರು ಸಲ್ಲಿಸುವ ಪುಸ್ತಕಕ್ಕೆ ಯಾವುದಾದರೂ ಪ್ರಶಸ್ತಿ/ಬಹುಮಾನಗಳು ಸಂದಿದ್ದಲ್ಲಿ ಅಂತಹ ಪುಸ್ತಕಗಳನ್ನು ಸಲ್ಲಿಸಬಾರದು.**
13. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 'ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ' ಪಡೆದ ಲೇಖಕರು ಬಹುಮಾನದ ವರ್ಷವನ್ನೊಳಗೊಂಡಂತೆ 5 ವರ್ಷಗಳವರೆಗೆ ಪ್ರಶಸ್ತಿಗೆ ತಮ್ಮ ಪುಸ್ತಕಗಳನ್ನು ಸಲ್ಲಿಸುವಂತಿಲ್ಲ.
14. ಸ್ಪರ್ಧೆಗೆ ಸಲ್ಲಿಸುವ ಲೇಖಕರು 3 ಪ್ರತಿಗಳನ್ನು ತಮ್ಮದೇ ವೆಚ್ಚದಲ್ಲಿ ಅಂಚೆ/ಕೊರಿಯರ್ ಮೂಲಕ ಅಥವಾ ಖುದ್ದಾಗಿ ಸಲ್ಲಿಸಬೇಕು.
15. ಪ್ರಶಸ್ತಿ ವಿಜೇತರಿಗೆ ಮಾತ್ರ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಲು 2ನೇ ದರ್ಜೆ ರೈಲು ಅಥವಾ ಬಸ್ಸು ಪ್ರಯಾಣದ ವೆಚ್ಚವನ್ನು ಹಾಗೂ ಸ್ಥಳೀಯ ಪ್ರಯಾಣ ವೆಚ್ಚವನ್ನು ಭರಿಸಲಾಗುವುದು.
16. ಪ್ರಶಸ್ತಿಗೆ ಆಯ್ಕೆಯಾದ ಕೃತಿಯ ಪ್ರತಿಗಳನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರದ ವತಿಯಿಂದ ಮಾರಾಟ ಮಾಡಲು ಅನುವುಮಾಡಿಕೊಡಬೇಕು. ಅದಕ್ಕಾಗಿ ಕನಿಷ್ಠ 50 ಪ್ರತಿಗಳನ್ನಾದರೂ ಲೇಖಕರು ಸರಬರಾಜು ಮಾಡಬೇಕಾಗುತ್ತದೆ.
17. ಪ್ರಶಸ್ತಿಯ ತೀರ್ಮಾನ ಕುರಿತಂತೆ ಯಾವುದೇ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ. ಬೆಂಗಳೂರು ಕೃಷಿ ವಿಶ್ವವಿದ್ಯಾ ನಿಲಯದ ತೀರ್ಮಾನವೇ ಅಂತಿಮವಾದದ್ದು.

Scanned with OKEN Scanner

**ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 'ಕೃಷಿ ಪುಸ್ತಕ ಪ್ರಶಸ್ತಿ–2024ರ ಅರ್ಜಿ ನಮೂನೆ**

1. ಲೇಖಕರ ಹೆಸರು: ______________________________

2. ವಿಳಾಸ: ______________________________

______________________________

______________________________ ಪಿನ್ ಕೋಡ್: ______________

3. ದೂರವಾಣಿ ಸಂಖ್ಯೆ: ______________ ಮೊಬೈಲ್: ______________

4. ಪುಸ್ತಕದ ಶೀರ್ಷಿಕೆ: ______________________________

______________________________

5. ಪ್ರಕಟವಾದ ವರ್ಷ: ______________________________

6. ಪ್ರಕಾಶಕರು ಮತ್ತು ಅವರ ವಿಳಾಸ: ______________________________

______________________________

7. ಪುಟಗಳ ಸಂಖ್ಯೆ: ______________

ಲೇಖಕರ ಸಹಿ

**ಘೋಷಣೆ**

______________________________ಎಂಬ ಶೀರ್ಷಿಕೆಯ ಈ ಪುಸ್ತಕವು ನನ್ನ ಸ್ವಂತ ರಚನೆಯಾಗಿದ್ದು, ಇದಕ್ಕೆ ಯಾವುದೇ ಪ್ರಶಸ್ತಿ/ಬಹುಮಾನ ಸಂದಿರುವುದಿಲ್ಲ. ನಾನು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 'ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ–2024ರ' ನಿಯಮ, ನಿಬಂಧನೆಗಳಿಗೆ ಬದ್ಧನಾಗಿರುತ್ತೇನೆ. ಈ ಮೇಲೆ ನಾನು ನೀಡಿರುವ ವಿವರಗಳು ಸತ್ಯವಾದವುಗಳೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ:

ದಿನಾಂಕ:

ಲೇಖಕರ ಸಹಿ

Scanned with OKEN Scanner